ಶ್ರೀ ಎಸ್.ಎಸ್. ಪಾಟೀಲ್ (ಸಹಕಾರ ಸಚಿವರು) : ``1997ರ ಕರ್ನಾಟಕ ಸಹಕಾರ ಸಂಘಗಳ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿಯಾಗಿರುವಂತೆ ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ : "1997ರ ಸಹಕಾರ ಸಂಘಗಳ (ತಿದ್ದುಪಡಿ) ವಿಧೇಯಕವನ್ನು, ತಿದ್ದುಪಡಿಯಾಗಿರುವಂತೆ ಅಂಗೀಕರಿಸುವುದು".

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

ಅಧ್ಯಕ್ಷರು : ಇನ್ನೊಂದು ಮಸೂದೆಯನ್ನು ತೆಗೆದುಕೊಳ್ಳೋಣ.

ಕರ್ನಾಟಕ ಸೌಹಾರ್ದ ಸಹಕಾರಿ ವಿಧೇಯಕ, 1997

ಶ್ರೀ ಎಸ್.ಎಸ್. ಪಾಟೀಲ್ (ಸಹಕಾರ ಸಚಿವರು) : ಮಾನ್ಯ ಅಧ್ಯಕ್ಷರೇ, ``1997ರ ಕರ್ನಾಟಕ ಸೌಹಾರ್ದ ಸಹಕಾರ ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲ್ಪಟ್ಟಿತು.

ಅಧ್ಯಕ್ಷರು : ವಿಧೇಯಕದ ಬಗ್ಗೆ ಏನಾದರೂ ಹೇಳುವುದು ಇದ್ದರೆ ಹೇಳಿ.

ಶ್ರೀ ಎಸ್.ಎಸ್. ಪಾಟೀಲ್ (ಸಹಕಾರ ಸಚಿವರು) : ಮಾನ್ಯ ಅಧ್ಯಕ್ಷರೇ, ಈಗಾಗಲೇ ನಾನು ಎಲ್ಲಾ ವಿವರ ನೀಡಿದ್ದೇನೆ. ಈಗ ನಾವು ಏನು ವಿಧೇಯಕ ಪಾಸ್ ಮಾಡಿದ್ದೇವೆ ಅದರಲ್ಲಿ ಇರುವ ಅಂಶಗಳೇ ಇದರಲ್ಲಿಯೂ ಸಹ ಇವೆ. ಹೆಚ್ಚಿಗೆ ಏನೂ ಇಲ್ಲ.

ಶ್ರೀ ಡಿ.ಆರ್. ಪಾಟೀಲ್ (ಗದಗ) : ಮಾನ್ಯ ಅಧ್ಯಕ್ಷರೇ, ಇದು ಹೊಸ ವಿಧೇಯಕ. ಇದರ ಬಗ್ಗೆ ನಮಗೆ ಯಾರಿಗೂ ಏನೂ ಗೊತ್ತಿಲ್ಲ. ನಾವು ಈ ವಿಧೇಯಕವನ್ನು ನೋಡಿಯೇ ಇಲ್ಲ. ಇದು ಹೊಸ ಆಕ್ಟ್ ಮುಂದಿನ ಅಧಿವೇಶನದಲ್ಲಿ ತನ್ನಿ.

ಶ್ರೀ ಎಸ್.ಎಸ್. ಪಾಟೀಲ್ : ಇದು ಬಹಳ ಉತ್ತಮವಾದ ಮಸೂದೆ. ಇವತ್ತು ಮಂಡನೆ ಮಾಡಿರುವ ವಿಧೇಯಕ ಅಲ್ಲ. ಈ ವಿಧೇಯಕವನ್ನು ಹಿಂದೆಯೇ ನಾನು ಈ ಸದನದಲ್ಲಿ ಮಂಡಿಸಿದ್ದೇನೆ. ಈ ಮಸೂದೆ ಈಗ ನಾವು ಮಂಜೂರಾತಿ ಕೊಟ್ಟ ಮಸೂದೆಗಿಂತ ಫ್ರೀ ಆಗಿದೆ. ಸರ್ಕಾರದ ಹಿಡಿತ ಇದರಲ್ಲಿ ಏನೂ ಬರುವುದಿಲ್ಲ.

ಶ್ರೀ ಡಿ.ಆರ್. ಪಾಟೀಲ್ : ಇದು ಹೊಸ ವಿಧೇಯಕದ ಸದಸ್ಯರು ಯಾರೂ ಓದಿಲ್ಲ.

ಶ್ರೀ ಎಸ್.ಎಸ್. ಪಾಟೀಲ್ : ಇದು ಮೂರನೇ ಅಧಿವೇಶನ ಈ ವಿಧೇಯಕ ಮಂಡನೆ ಮಾಡಿ. ಈ ವಿಧೇಯಕವನ್ನು ಎಷ್ಟೋ ಜನ ಮೆಚ್ಚಿದ್ದಾರೆ. ಮಾನ್ಯ ಕುರಿಯನ್ ರವರೂ ಸಹ ಮೆಚ್ಚಿ ನನಗೆ ಪತ್ರ ಬರೆದಿದ್ದಾರೆ.

ಶ್ರೀ ಕೆ. ವಿಶ್ವೇಶ್ವರ ಹೆಗಡೆ (ಅಂಕೋಲ) : ಮಾನ್ಯ ಅಧ್ಯಕ್ಷರೇ, ಎಲ್ಲಾ ಸಹಕಾರಿಗಳು ಇದನ್ನು ಸ್ವಾಗತ ಮಾಡಿದ್ದಾರೆ. ಆದ್ದರಿಂದ ನಾವು ಒಪ್ಪಿಗೆ ಕೊಡುವುದು ಒಳ್ಳೆಯದು.

ಶ್ರೀ ಸಿ. ಭೈರೇಗೌಡ (ಕೃಷಿ ಸಚಿವರು) : ಮಾನ್ಯ ಅಧ್ಯಕ್ಷರೇ, ವಿಧೇಯಕದ ಈಗಾಗಲೇ ಮಂಡನೆ ಆಗಿದೆ. ಈಗ ನಾವು ಪರಿಶೀಲನಾ ಹಂತದಲ್ಲಿ ಇದ್ದೇವೆ. ಈಗ ಈ ವಿಧೇಯಕವನ್ನು ನಾವು ನೋಡಿಲ್ಲ ನೋಡಬೇಕು ಅಂದರೆ ಹೇಗೆ? ತಾವು ನೋಡಿ ಓದಿ ಈ ವಿಧೇಯಕ ಪಾಸಾಗುವುದು ಯಾವಾಗ? ತಮ್ಮನ್ನು ನೋಡಬೇಡಿ ಎಂದು ಹೇಳಿದವರು ಯಾರು? ತಾವು ವಿಧೇಯಕವನ್ನು ನೋಡಿ ಕೊಂಡು ಬರಬೇಕಾಗಿತ್ತು.

ಶ್ರೀ ಜೆ.ಎಚ್. ಪಟೇಲ್ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೇ, ಈ ವಿಧೇಯಕದ ತತ್ವವನ್ನು ಎಲ್ಲರೂ ಒಪ್ಪಿದ್ದಾರೆ. ಕೆಲವರು ಓದದೇ ಇರಬಹುದು. ಮಾನ್ಯ ಸಚಿವರು ಹೇಳಿದ ಹಾಗೆ ಈಗ ಒಂದು ವಿಧೇಯಕ್ಕೆ ಒಪ್ಪಿಗೆ ಕೊಟ್ಟಿದ್ದಾರೆ. ಈಗ ಇರುವ ಲಿಟರಲಿಯಲ್ಲಿ, ಫಾರಂನಲ್ಲಿ ಏನಾದರೂ ದೋಷವಿದ್ದರೆ ತಾವುಗಳು ಹೇಳಿದರೆ ಒಪ್ಪಿಕೊಳ್ಳೋಣ. If you agree with the principle, why delay? ಪ್ರಿನ್ಸಿಪಲ್‌ಗೆ ವಿರೋಧ ಇದ್ದರೆ ಚರ್ಚೆ ಮಾಡೋಣ. ಆದರೆ ನೀವು ಅದಕ್ಕೆ ಒಪ್ಪಿದ್ದೀರಿ.

ಶ್ರೀ ಕಾಗೋಡು ತಿಮ್ಮಪ್ಪ (ಸಾಗರ) : ವಿರೋಧ ಏತಕ್ಕೆ ಇದೆ ಅಂದರೆ, ಈಗ ಸಹಕಾರಿ ಕ್ಷೇತ್ರವನ್ನು ನಿರ್ವಹಣೆ ಮಾಡಲು ನಮ್ಮಲ್ಲಿ ಸಹಕಾರ ಕಾನೂನು ಇಲಾಖಾ ಇದೆ. ಅದನ್ನು ಅಪರೇಟ್ ಮಾಡುತ್ತಿದ್ದೇವೆ, ತಿದ್ದುಪಡಿ ಬೇಕಾದಲ್ಲಿ ತಂದಿದ್ದೇವೆ. ಈ ಸೌಹಾರ್ದ ಸಹಕಾರ ಕಾನೂನಿನಲ್ಲಿ ಏನು ಹೇಳುತ್ತಾರೆ ಅಂದರೆ, ಸರಕಾರದ ಪ್ರವೇಶ ಏನೊಂದೂ ಇರುವುದಿಲ್ಲ, ಅದನ್ನು ಪ್ರತ್ಯೇಕವಾದ ಕಾನೂನು ಮಾಡಬೇಕೆಂದು ಹೇಳುತ್ತಾರೆ. ಯಾವುದೇ ಸಹಕಾರ ಸಂಘಕ್ಕೆ ಸರಕಾರದ ಪ್ರವೇಶ ಇರಕೂಡದು ಎಂಬ ಅಭಿಪ್ರಾಯ ಮತ್ತು ಸಂಕಲ್ಪ ಇರುವುದಾದರೆ ಈಗ ಇರತಕ್ಕಂಥ ಸಹಕಾರ ಇಲಾಖಾ ಕಾನೂನು ಏನಿದೆ ಅದಕ್ಕೆ ಒಂದು ತಿದ್ದುಪಡಿಯನ್ನು ತಂದು ಬಿಟ್ಟರೆ ಹೊಸ ಕಾನೂನನ್ನು ತರಬೇಕಾದ ಅವಶ್ಯಕತೆ ಇರುವುದಿಲ್ಲ. ಒಂದು ಇಲಾಖೆಯನ್ನು ನಿರ್ವಹಣೆ ಮಾಡಲು ಒಂದು ಕಾನೂನು ಇದೆ. ಈ ಕಾನೂನು ಬಲದಿಂದಲೇ ಈ ಎಲ್ಲಾ ಉದ್ದೇಶಗಳನ್ನು ಸಾಧಿಸುವುದಕ್ಕೆ ಸಾಧ್ಯತೆ ಇರುವಾಗ ಮತ್ತೊಂದು ಪರ್ಯಾಯ ಕಾನೂನನ್ನು ತರುವ ಅಗತ್ಯ ಇದೆಯೇ ಎಂಬುದನ್ನು ಹೇಳಬೇಕು. ನಮ್ಮಲ್ಲಿ ಜಿಲ್ಲಾಪಂಚಾಯತ್. ತಾಲ್ಲೂಕು ಪಂಚಾಯತ್‌ಗಳಿಗೆ ಎಂದು ಕಾನೂನು ಇದೆ. ನ್ಯಾಯ ಪಂಚಾಯತಿಗೆ ಪ್ರತ್ಯೇಕವಾದ ಒಂದು ಚಾಪ್ಟರ್ ಇದೆಯಲ್ಲವೇ? ಅದೇ ರೀತಿಯಲ್ಲಿಯೂ ಬೇಕಾದರೆ ಮಾಡಬಹುದು. ಯಾವ ಸಹಕಾರ ಸಂಘಗಳು ಶೇರ್ ಕ್ಯಾಪಿಟಲ್ ಎಲ್ಲಾ ಅವರವರೇ ಮಾಡಿಕೊಳ್ಳುತ್ತಾರೋ ಅಂತಹ ಸಹಕಾರ ಸಂಘಗಳಿಗೆ ಯಾವುದೇ ಕ್ಲಾಸ್‌ಗಳು, ವ್ಯಾಖ್ಯೆಗಳು, ಅನ್ವಯವಾಗುವುದಿಲ್ಲ ಎಂದು ಮಾಡಿ ಬಿಟ್ಟರೆ ವಿಷಯ ಮುಗಿಯುತ್ತದೆ.

SRI J.H. PATEL : Will it stand the test of law?

ಶ್ರೀ ಕಾಗೋಡು ತಿಮ್ಮಪ್ಪ : ಅವರ ಉದ್ದೇಶ ಏನೆಂದರೆ, ಕೊ-ಅಪರೇಟಿವ್ ಆಕ್ಟ್ ಏನಿದೆ ಅದು ಯಾವುದೂ ಅಪ್ಲೈ ಆಗಬಾರದು, ಸರಕಾರದ ಪ್ರವೇಶ ಇಲ್ಲವೆಂದರೆ ಅವರವರೇ ಮಾಡಿಕೊಂಡು ಹೋಗಲಿ ಎಂದು ಇರಬಹುದು. ಅಲ್ಲಿ ಮೀಟಿಂಗ್ ಕಂಡಕ್ಟ್ ಮಾಡಲು, ಚುನಾವಣೆ ಮಾಡಲು ಪ್ರೋಸೀಜರ್ಸ್ ಬೇಕಲ್ಲವೇ? ಆ ಎಲ್ಲಾ ಪ್ರೋಸೀಜರ್ಸ್ ಇದರಲ್ಲಿ ಈಗಾಗಲೇ ಇವೆ. ಒಟ್ಟಿನಲ್ಲಿ ಇರುವ

ವ್ಯವಸ್ಥೆಯನ್ನು ದುರಸ್ತಿ ಪಡಿಸಿಕೊಂಡರೆ ಸಾಕು ಎಂದು ನಮ್ಮ ಅಭಿಪ್ರಾಯ. ಇರುವುದನ್ನೇ ಸರಿಪಡಿಸಿಕೊಳ್ಳಲು ಆಗದೇ ಇನ್ನೊಂದು ಹೊಸ ಕಾನೂನನ್ನು ಮಾಡಿ ಮತ್ತೆ ಮತ್ತೆ ಹೊಸ ಸಹಕಾರ ಸಂಘಗಳನ್ನು ಕಟ್ಟುವುದಕ್ಕಿಂತ ಇರುವ ಕಾನೂನುಗಳಿಂದಲೇ ಇರುವ ಲೋಪದೋಷಗಳನ್ನು ದುರಸ್ತಿಪಡಿಸಿಕೊಳ್ಳೋಣ. ಸೌಹಾರ್ದ ಕಾನೂನು ತಂದು ಇರುವ ಮತ್ತು ಮುಂದೆ ಆಗತಕ್ಕಂಥವುಗಳಿಗೆ ಸರಕಾರದವರು ಯಾವುದೇ ರೀತಿಯಲ್ಲಿ ಪ್ರವೇಶ ಮಾಡುವುದಿಲ್ಲವೆಂದು ಹೇಳಿದರೂ ಕೂಡ ಅವುಗಳಿಗೆ ಶೇರುಬಂಡವಾಳ ಸೇರಿಸತಕ್ಕಂಥಾದ್ದು, ಚುನಾವಣೆ ಮಾಡತಕ್ಕಂಥಾದ್ದು, ನಿರ್ದೇಶಕರುಗಳನ್ನು ಹೇಗೆ ಆಯ್ಕೆ ಮಾಡಬೇಕು ಮತ್ತು ಅವರು ಎಷ್ಟು ಇರಬೇಕೆಂಬ ವಿಚಾರವೇ ಆಗಬಹುದು, ಆಡಿಟ್ ಮಾಡುವ ವಿಚಾರವೇ ಆಗಲಿ, ಮುಂತಾಗಿ ವಿಚಾರಗಳು ಬರುತ್ತವೆ ಮತ್ತು ಅಲ್ಲಿ ಸಾರ್ವಜನಿಕರ ಹಣವೂ ಇರುತ್ತದೆ. ಸರಕಾರವು ಅದರ ಮೇಲೆ ಯಾವುದೇ ರೀತಿಯಲ್ಲಿ ನಿಯಂತ್ರಣವನ್ನು ಮಾಡಬೇಕಾಗುತ್ತದೆ. ಆಡಿಟ್ ಮಾಡಬೇಕಾಗುತ್ತದೆ ಮತ್ತು ಅಕಸ್ಮಾತ್ ಹಣದ ದುರುಪಯೋಗವಾದರೆ ಅವರನ್ನು ಕೇಳುವುದು ಬೇಡವೇ? ಮೋಸ ಮಾಡಿದರೆ ಕೇಳುವುದು ಬೇಡವೇ? ಒಂದೇ ಕುಟುಂಬದವರು ಒಂದು ಸೊಸೈಟಿ ಮಾಡಿಕೊಂಡು ಹತ್ತುಲಕ್ಷ ರೂಪಾಯಿಗಳ ಶೇರ್ ಹಾಕಿಕೊಂಡು ಅವರೇ ಆಡಳಿತ ಮಾಡಿಕೊಂಡು ಹೋಗುತ್ತಾರೆ ಅಂದರೆ ಅದು ಆಗಬಹುದೇ? ಅಂಥವುಗಳನ್ನಾದರೂ ರೆಗ್ಯುಲೇಟ್ ಮಾಡಬೇಕಲ್ಲವೇ?

ಶ್ರೀ ಎಸ್.ಎಸ್. ಪಾಟೀಲ್ : ಸ್ವತಂತ್ರವಾಗಿ ಅವರ ಮನೆಯದ್ದೇ ಒಂದು ಸಹಕಾರ ಸಂಘವನ್ನು ಕಟ್ಟಿಕೊಂಡು ನಡೆಸಬಹುದು.

ಶ್ರೀ ಕಾಗೋಡು ತಿಮ್ಮಪ್ಪ : ನಮ್ಮ ಉತ್ತರ ಕನ್ನಡದ ಬೆಳಗಾಂ ಮತ್ತು ಧಾರವಾಡದ ಕೆಲವು ಸಹಕಾರಿಗಳು ಒಂದೊಂದು ಸಂದರ್ಭದಲ್ಲಿ ಏನೇನು ಹೇಳುತ್ತಾರೋ ಗೊತ್ತಾಗುವುದಿಲ್ಲ.

ಶ್ರೀ ಎಸ್.ಎಸ್. ಪಾಟೀಲ್ : ನಮ್ಮ ಅರ್ಬನ್ ಬ್ಯಾಂಕ್‌ಗಳಿಗೆ ನಮ್ಮ ರೈತರು ಏಕೆ ಹೋಗಬೇಕು? ನಮ್ಮ ಅಧಿಕಾರಿಗಳು ಏಕೆ ಹೋಗಬೇಕು? ನಾವು ಇದರಲ್ಲಿ ಒಂದು ಫೆಡರಲ್ ವ್ಯವಸ್ಥೆಯನ್ನು ತಂದಿದ್ದೇವೆ. ಇದನ್ನು ಪ್ರಯೋಗ ಮಾಡಿ ನೋಡೋಣ. ಇದು ಆಂಧ್ರದಲ್ಲಿ ಜಾರಿಯಲ್ಲಿದೆ.

ಅಧ್ಯಕ್ಷರು : ನಾನು ಈಗ ನ್ಯಾಯ ಮಾಡುತ್ತೇನೆ. ನೀವು ಇದು ಬಹಳ ಚೆನ್ನಾಗಿ ನಡೆಯಬೇಕು ಎಂದು ಹೇಳುತ್ತಿದ್ದೀರಿ. ಇದರ ಜೊತೆಗೆ ಒಂದು ಕಾನೂನು ತಂದು ಯಶಸ್ವಿಯಾಗಿ ನಡೆಯುವ ಹಾಗೆ ಮಾಡಿದ್ದೇನೆ. ಇಲ್ಲಿ ಏನೂ ಹೆಚ್ಚು ಕಡಿಮೆ ಆಗಬಾರದು, ಸಹಕಾರಿಗಳೆಲ್ಲಾ ಸ್ವತಂತ್ರರಾಗಿ ಇರಬೇಕೆಂದು ಹೊಸ ಕಾನೂನು ತಂದಿದ್ದಾರೆ. ಅದಕ್ಕೆ ಯಾಕೆ ತಕರಾರು ಮಾಡುತ್ತೀರಿ?

ಶ್ರೀ ಡಿ.ವಿ. ಸದಾನಂದಗೌಡ (ಪುತ್ತೂರು) : ಮಾನ್ಯ ಅಧ್ಯಕ್ಷರೇ, ನಾವು ಈ ಕಾನೂನನ್ನು ಏತಕ್ಕಾಗಿ ಸ್ವಾಗತ ಮಾಡುತ್ತೇವೆ ಅಂದರೆ, ನಮ್ಮ ಸಮಾಜದಲ್ಲಿರುವ ಬೇರೆ ಬೇರೆ ಜನಗಳ ಸಮಾನ ಮನಸ್ಕರ ಬಂಡವಾಳವನ್ನು ಹಾಕಿ ಮಾಡಿದಾಗ ಸರಕಾರದ ಹಸ್ತಕ್ಷೇಪವು ಅಲ್ಲಿ ಇರದ ರೀತಿಯಲ್ಲಿ ಸರಾಗವಾಗಿ ನಡೆಯಲು ಈ ಕಾನೂನು ಬೇಕು. ಅದಕ್ಕಾಗಿ ನಾವು ಈ ಕಾನೂನನ್ನು ಸ್ವಾಗತ ಮಾಡುತ್ತೇವೆ.

ಶ್ರೀ ಟಿ.ಡಿ. ಜಯಚಂದ್ರ (ಕಳ್ಳಂಬೆಳ್ಳ) : ಮಾನ್ಯ ಅಧ್ಯಕ್ಷರೇ, ಇದು ಒಂದು ಹೊಸ ತರಹದ ಮಸೂದೆ. ಇದು ಆಂಧ್ರಪ್ರದೇಶದಲ್ಲಿ ಮಾತ್ರ ಇರತಕ್ಕಂಥಾದ್ದು. ಅದು ಒಟ್ಟಿಗೆ ಇದೆಯೋ ಅಥವಾ ಬೇರೆ ಬೇರೆ ಇದೆಯೋ ಎಂಬುದನ್ನು ಕೂಡ ವಿಚಾರ ಮಾಡಬೇಕಾಗುತ್ತದೆ. ಈ ಎಲ್ಲಾ ಅನುಮಾನಗಳನ್ನು ಪರಿಹರಿಸಲು ಜಂಟಿ ಸದನದ ಸಮಿತಿಗೆ ರೆಫರ್ ಮಾಡಿ.

ಅಧ್ಯಕ್ಷರು : ಇದೆಲ್ಲಾ ಜಂಟಿ ಸದನದ ಸಮಿತಿಗೆ ಹೋಗ ಬೇಕಾಗಿಲ್ಲ.

ಶ್ರೀ ಎಸ್.ಎಸ್. ಪಾಟೀಲ್ : ಸರಕಾರದವರು ಅವರನ್ನು ಕೇಳುವ ಹಾಗೆ ಇಲ್ಲ. ರಿಜಿಸ್ಟ್ರೇಷನ್ ಮಾಡಿಕೊಟ್ಟರೆ ಮುಗಿಯಿತು. ಅದಕ್ಕೆ ಒಂದು ಫೆಡರಲ್ ವ್ಯವಸ್ಥೆಯನ್ನು ಮಾಡಿದ್ದೇವೆ. ಇದು ಯಶಸ್ವಿಯಾಗಿ ನಡೆಯುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ : ಇದು ತಮ್ಮೆಲ್ಲರಿಗೆ ಸರಿ ಎಂದು ಕಂಡು ಬಂದರೆ ಮಾಡಿ. ನಾವು ಈ ಸಹಕಾರಿ ಕ್ಷೇತ್ರದಲ್ಲಿ ತಲೆ ಹಾಕಿದವರು ಅಲ್ಲ. ಒಟ್ಟಿನಲ್ಲಿ ಹಲವಾರು ಕಾನೂನುಗಳನ್ನು ಮಾಡಿಕೊಂಡು ಜನರಿಗೆ ನಷ್ಟ ಆಗಬಾರದು. ಇದರಲ್ಲಿ ಡೆಫಿನಿಷನ್ಸ್ ಇದೆ, ಬೈಲಾ ಇದೆ, ಬೋರ್ಡ್ ಎಂದರೆ ಏನು ಎಂದಿದೆ, ಮುಂತಾಗಿ ಎಲ್ಲವೂ ಇದೆ. ಈ ಎಲ್ಲಾ ಡೆಫನಿಷನ್ಸ್ ಕೂಡ ನಮ್ಮಲ್ಲಿ ಇರುವ ಆಕ್ಟ್‌ನಲ್ಲಿಯೇ ಇದೆ. Director means an elected Member of the Board.

ಶ್ರೀ ಬಿ.ಆರ್. ಯಾವಗಲ್ (ನರಗುಂದ) : ಮಾನ್ಯ ಅಧ್ಯಕ್ಷರೇ, ಸೌಹಾರ್ದ ಆಕ್ಟ್‌ಗೆ ಚಿಂತನೆ ಮತ್ತು ಕೆಲಸ ಪ್ರಾರಂಭವಾದುದು 3-4 ವರ್ಷಗಳಿಂದ. ಅನೇಕ ರಾಜ್ಯ ಮತ್ತು ರಾಷ್ಟ್ರಮಟ್ಟದಲ್ಲಿರತಕ್ಕಂಥ ಮಲ್ಟಿಸ್ಟೇಟ್ ಕೋ-ಅಪರೇಟಿವ್ ಆಕ್ಟ್‌ನ ಕೆಳಗಡೆಯೂ ಸಹಿತ, ಈ ಕೋ-ಅಪರೇಟಿವ್ ತತ್ವಕ್ಕೆ ವಿರುದ್ಧವಾಗಿರತಕ್ಕಂಥ ಅನೇಕ ಲೋಪಗಳು ಇದ್ದುದರಿಂದ ಮತ್ತು ಕಾರ್ಯನಿರ್ವಹಣೆ ಮಾಡುವಾಗ ಸರಕಾರವು ಹಸ್ತಕ್ಷೇಪ ಮಾಡುವ ಸಂದರ್ಭ ಇರುವುದರಿಂದ ಈ ಕುರಿತು ಚಿಂತನೆ ಪ್ರಾರಂಭವಾಯಿತು. ಬಹುತೇಕ ರಾಜ್ಯಗಳಲ್ಲಿ ಇಂಥ ಕಾನೂನು ಆಗಿದೆ ಅಥವಾ ಆಗುತ್ತಾ ಇದೆ. ಇವೊತ್ತು ಅವರು ಹೇಳಿದ್ದು ನಿಜ. ಇರುವ ಕಾನೂನಿಗೆ ಒಂದು ಸೆಕ್ಷನ್ ಸೇರಿಸುವುದರಿಂದಲೂ ಇದನ್ನು ಮಾಡಬಹುದು. ತಮಗೆ ಗೊತ್ತಿರುವ ಹಾಗೆ ಆಡಳಿತ ಮಾಡುವ ಯಂತ್ರ ಏನಿದೆ, ನಾವು ಗೊಂದಲ ಮನಸ್ಸಿನಿಂದ ಪ್ರಾಮಾಣಿಕತೆಯಿಂದ ಕಾಯಿದೆಯನ್ನು ಮಾಡಿದರೂ ಕಾರಣಾಂತರಗಳಿಂದ ಮತ್ತೆ ಅದನ್ನು ತಮ್ಮ ವ್ಯಾಪ್ತಿಯಲ್ಲಿ ತೆಗೆದುಕೊಳ್ಳಲು ಪ್ರಯತ್ನ ಮಾಡುತ್ತದೆ. ಈಗಿರುವ ಕಾನೂನಿನ ಜೊತೆಗೆ ಅನುದಾನವನ್ನು ಪಡೆದಿರಬಹುದು, ಕೋ-ಅಪರೇಟಿವ್ ಆಕ್ಟ್ ಕೆಳಗಡೆ ರಿಜಿಸ್ಟ್ರೇಷನ್ ಮಾಡಿದ್ದಿರಬಹುದು, ಮುಂತಾಗಿ ಅಲ್ಲಿರತಕ್ಕಂಥ ಎಲ್ಲಾ ನ್ಯೂನ್ಯತೆಗಳನ್ನು ತೆಗೆದರೂ ಕೂಡ ಅಧಿಕಾರಿಶಾಹಿ ತನ್ನ ವ್ಯಾಪ್ತಿಯಲ್ಲಿ ತೆಗೆದುಕೊಳ್ಳಲು ಪ್ರಯತ್ನ ಮಾಡುತ್ತದೆ. ಸೌಹಾರ್ದ ಆಕ್ಟ್ ಎಂದು ಮಹಾದೊಡ್ಡ ಆಕ್ಟನ್ನು ತರುವುದಕ್ಕೆ ಸಾಧ್ಯವಿಲ್ಲ. ಅದರಲ್ಲಿ ಬೇರೆ ಕಲಮಗಳು ಇರುವುದಕ್ಕೂ ಸಾಧ್ಯವಿಲ್ಲ. ಆದ್ದರಿಂದ ಸರಳವಾಗಿ ಸೂಕ್ತವಾಗಿ ಆಕ್ಟನ್ನು ಮಾಡಿದರೆ ತಪ್ಪಾಗುವುದಿಲ್ಲ ಎಂದು ಹೇಳಬಯಸುತ್ತೇನೆ.

ಕರ್ನಾಟಕ ಸೌಹಾರ್ದ ಸಹಕಾರ ವಿಧೇಯಕ, 1997 ಪರ್ಯಾಲೋಚನ ಪ್ರಸ್ತಾವ

ಅಧ್ಯಕ್ಷರು : ಪ್ರಸ್ತಾವ ಏನೆಂದರೆ,``1997ರ ಕರ್ನಾಟಕ ಸೌಹಾರ್ದ ಸಹಕಾರ ವಿಧೇಯಕವನ್ನು ಪರ್ಯಾಲೋಚಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2 ರಿಂದ 27ರ ವರೆಗೆ

ಅಧ್ಯಕ್ಷರು : "ಖಂಡ 2 ರಿಂದ 27ರ ವರೆಗೆ, ಎರಡೂ ಸೇರಿದಂತೆ, ಈ ವಿಧೇಯಕದ ಅಂಗವಾಗಿರುತ್ತದೆ."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2 ರಿಂದ 27 ರ ವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 28ಕ್ಕೆ ತಿದ್ದುಪಡಿ

ಶ್ರೀ ಎಸ್.ಎಸ್. ಪಾಟೀಲ್ (ಸಹಕಾರ ಸಚಿವರು) : ಖಂಡ 28ಕ್ಕೆ ಈ ಕೆಳಕಂಡ ತಿದ್ದುಪಡಿಯನ್ನು ಮಂಡಿಸುತ್ತಿದ್ದೇನೆ.

ಖಂಡ 28ರಲ್ಲಿ,

(i) (1)ನೇ ಉಪ ಖಂಡದಲ್ಲಿ,-

(ಎ) "ಹದಿನೈದು ದಿನಗಳೊಳಗೆ" ಎಂಬ ಪದಗಳ ತರುವಾಯ ಮತ್ತು ಅಧ್ಯಕ್ಷ ಅಥವಾ ಸಭಾಪತಿ ಮತ್ತು ಉಪಾಧ್ಯಕ್ಷೆ ಅಥವಾ ಉಪ ಸಭಾಪತಿಯ ಪದಾವಧಿಯ ಮುಕ್ತಾಯಕ್ಕೂ ನಿಕಟಪೂರ್ವದಲ್ಲಿ" ಎಂಬ ಪದಗಳನ್ನು ಸೇರಿಸತಕ್ಕದ್ದು.

(ಬಿ) ಮೊದಲನೇ ಪರಂತುಕದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ - ಮತ್ತು ಪರಂತು ಪದಾಧಿಕಾರಿಗಳ ಚುನಾವಣೆಯಲ್ಲಿ ಒಂದು ವೇಳೆ ಎಲ್ಲಾ ಚುನಾಯಿತ ನಿರ್ದೇಶಕರು ಅಭ್ಯರ್ಥಿಗಳಾಗಿದ್ದಲ್ಲಿ ಮುಖ್ಯ ಕಾರ್ಯನಿರ್ವಾಹಕರು ಅಂಥ ಮಂಡಳಿಯ ಸಭೆಯ ಅಧ್ಯಕ್ಷತೆ ವಹಿಸತಕ್ಕದ್ದು."

(ii) (2)ನೇ ಉಪಖಂಡದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು ಎಂದರೆ ``(3) ಅಧ್ಯಕ್ಷ ಅಥವಾ ಸಭಾಪತಿ, ಉಪಾಧ್ಯಕ್ಷ ಅಥವಾ ಉಪಸಭಾಪತಿಯ ಪದಾವಧಿಯು ಚುನಾವಣೆ ದಿನಾಂಕದಿಂದ ಎರಡೂವರೆ ವರ್ಷಗಳಾಗಿರತಕ್ಕದ್ದು".

ವಿವರಣೆ : ಅಧ್ಯಕ್ಷ ಅಥವಾ ಸಭಾಪತಿ, ಉಪಾಧ್ಯಕ್ಷ ಅಥವಾ ಉಪ ಸಭಾಪತಿಯ ಹುದ್ದೆಗೆ ಪದಾವಧಿಯ ಮಧ್ಯದಲ್ಲಿ ಚುನಾವಣೆ ನಡೆಸಿದರೆ ಪದಾವಧಿಯ ಉಳಿದ ಅವಧಿಯನ್ನು ಪೂರ್ಣಾವಧಿಯೆಂದೇ ಭಾವಿಸತಕ್ಕದ್ದು.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ,

"ಖಂಡ 28ರಲ್ಲಿ,

(i) (1)ನೇ ಉಪ ಖಂಡದಲ್ಲಿ, -

(ಎ) "ಹದಿನೈದು ದಿನಗಳೊಳಗೆ" ಎಂಬ ಪದಗಳ ತರುವಾಯ ಮತ್ತು ಅಧ್ಯಕ್ಷ ಅಥವಾ ಸಭಾಪತಿ ಮತ್ತು ಉಪಾಧ್ಯಕ್ಷ ಅಥವಾ ಉಪ ಸಭಾಪತಿಯ ಪದಾವಧಿಯ ಮುಕ್ತಾಯಕ್ಕೂ ನಿಕಟಪೂರ್ವದಲ್ಲಿ" ಎಂಬ ಪದಗಳನ್ನು ಸೇರಿಸತಕ್ಕದ್ದು.

(ಬಿ) ಮೊದಲನೇ ಪರಂತುಕದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ - "ಮತ್ತು ಪರಂತು ಪದಾಧಿಕಾರಿಗಳ ಚುನಾವಣೆಯಲ್ಲಿ, ಒಂದು ವೇಳೆ ಎಲ್ಲಾ ಚುನಾಯಿತ ನಿರ್ದೇಶಕರು ಅಭ್ಯರ್ಥಿಗಳಾಗಿದ್ದಲ್ಲಿ, ಮುಖ್ಯ ಕಾರ್ಯನಿರ್ವಾಹಕರು ಅಂಥ ಮಂಡಳಿಯ ಸಭೆಯ ಅಧ್ಯಕ್ಷತೆ ವಹಿಸತಕ್ಕದ್ದು".

(ii) (2)ನೇ ಉಪಖಂಡದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ``(3) ಅಧ್ಯಕ್ಷ ಅಥವಾ ಸಭಾಪತಿ, ಉಪಾಧ್ಯಕ್ಷ ಅಥವಾ ಉಪ ಸಭಾಪತಿಯ ಪದಾವಧಿಯು ಚುನಾವಣೆ ದಿನಾಂಕದಿಂದ ಎರಡೂವರೆ ವರ್ಷಗಳಾಗಿರತಕ್ಕದ್ದು".

ವಿವರಣೆ : ಅಧ್ಯಕ್ಷ ಅಥವಾ ಸಭಾಪತಿ, ಉಪಾಧ್ಯಕ್ಷ ಅಥವಾ ಉಪ ಸಭಾಪತಿಯ ಹುದ್ದೆಗೆ ಪದಾವಧಿಯ ಮಧ್ಯದಲ್ಲಿ ಚುನಾವಣೆ ನಡೆಸಿದರೆ ಪದಾವಧಿಯ ಉಳಿದ ಅವಧಿಯನ್ನು ಪೂರ್ಣಾವಧಿಯೆಂದೇ ಭಾವಿಸತಕ್ಕದ್ದು,"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ 28 ತಿದ್ದುಪಡಿಯಾದ ರೀತಿಯಲ್ಲಿ :

ಅಧ್ಯಕ್ಷರು : ಪ್ರಸ್ತಾವ ಏನೆಂದರೆ,

"ಖಂಡ 28 ತಿದ್ದುಪಡಿಯಾದ ರೀತಿಯಲ್ಲಿ ವಿಧೇಯಕದ ಅಂಗವಾಗಿರುತ್ತದೆ".

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಹಾಗೂ ಖಂಡ 28 ತಿದ್ದುಪಡಿಯಾದ ರೀತಿಯಲ್ಲಿ ವಿಧೇಯಕಕ್ಕೆ ಸೇರಿಸಲ್ಪಟ್ಟಿತು.

ಖಂಡ 29 ರಿಂದ 72 ರವರೆಗೆ

ಅಧ್ಯಕ್ಷರು : ಪ್ರಸ್ತಾವ ಏನೆಂದರೆ

"ಖಂಡ 29 ರಿಂದ 72 ರವರೆಗೆ ಎರಡೂ ಸೇರಿದಂತೆ ವಿಧೇಯಕದ ಅಂಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಹಾಗೂ ಖಂಡ 29ರಿಂದ 72ರ ವರೆಗೆ ವಿಧೇಯಕಕ್ಕೆ ಸೇರಿಸಲ್ಪಟ್ಟಿತು.

ಖಂಡ 1 ಇತ್ಯಾದಿ

ಅಧ್ಯಕ್ಷರು : ಪ್ರಸ್ತಾವ ಏನೆಂದರೆ, "ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ".

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಎಸ್.ಎಸ್. ಪಾಟೀಲ್ (ಸಹಕಾರ ಸಚಿವರು) : ಮಾನ್ಯ ಅಧ್ಯಕ್ಷರೇ, ``1997ರ ಕರ್ನಾಟಕ ಸೌಹಾರ್ದ ಸಹಕಾರಿ ವಿಧೇಯಕಕ್ಕೆ ತಿದ್ದುಪಡಿಯಾದ ರೂಪದಲ್ಲಿ ಅಂಗೀಕಾರವನ್ನು ನೀಡಬೇಕೆಂದು ಕೋರುತ್ತೇನೆ."

ಅಧ್ಯಕ್ಷರು : ಪ್ರಸ್ತಾವೆ ಏನೆಂದರೆ ``1997ರ ಕರ್ನಾಟಕ ಸೌಹಾರ್ದ ಸಹಕಾರಿ ವಿಧೇಯಕವನ್ನು ತಿದ್ದುಪಡಿಯಾದ ರೂಪದಲ್ಲಿ ಅಂಗೀಕರಿಸುವುದು".

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

1.20 ಪಿ.ಎಂ

ಅಧ್ಯಕ್ಷರ ಅಪ್ಪಣೆ ಮೇರೆಗೆ

ಗುಲ್ಬರ್ಗ ಮತ್ತು ಬೀದರ್ ನಲ್ಲಿ ರೈತರುಗಳು ಆತ್ಮಹತ್ಯೆ ಮಾಡಿಕೊಳ್ಳುತ್ತಿರುವುದರ ಬಗ್ಗೆ ನೇಮಿಸಿರುವ ಸಮಿತಿಯ ಅವಧಿಯನ್ನೂ ವಿಸ್ತರಿಸುವ ಬಗ್ಗೆ

ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ) : ಮಾನ್ಯ ಅಧ್ಯಕ್ಷರೇ, ಗುಲ್ಬರ್ಗ ಮತ್ತು ಬೀದರ್‌ನಲ್ಲಿ ರೈತರುಗಳ ಆತ್ಮಹತ್ಯೆಯಾಯಿತು ಎಂದು ಸಮಿತಿಯನ್ನು ಮಾಡಿದ್ದೀರಿ. ಆ ಸಮಿತಿಯು ಇನ್ನೂ ಎಕ್ಸಿಸ್ಟೆನ್ಸ್‌ನಲ್ಲಿ ಇದೆಯೋ ಇಲ್ಲವೋ ಎಂಬುದು ಗೊತ್ತಾಗಬೇಕು. ನಮಗೆ ಮೀಟಿಂಗ್ ಕರೆಯಿರಿ ಎಂದು ಹೇಳುತ್ತಾರೆ. ಇಲ್ಲಿ ಟೈಂ ಎಕ್ಸ್‌ಟೆನ್‌ಶನ್ ಆಗಿದೆಯೋ ಇಲ್ಲವೋ ಎಂದು ಗೊತ್ತಾಗುತ್ತಿಲ್ಲ. ದಯವಿಟ್ಟು ತಾವುಗಳು ತಿಳಿಸಬೇಕು.